ಶ್ರೀ ವಿ. ಎಸ್. ಲಕ್ಷ್ಮೀಕಾಂತಪ್ಪ.—ಈ ಇನಾಂತಿ ರದ್ದಿಯಾದ ನಂತರ ಆಯಾಯ ಗ್ರಾಮಗಳಲ್ಲಿ ಎಷ್ಟು ಜನ ರೈತರು ಭೂಮಾಲೀಕತ್ವವನ್ನು ಪಡೆದಿದ್ದಾರೆ?

ಶ್ರೀ ಎಂ. ವಿ. ಕೃಷ್ಣಪ್ಪ.—ತಾವು ಕೇಳಿರುವ ತಾಲ್ಲೂಕಿನಲ್ಲಿ 4 ಗ್ರಾಮಗಳು ಇವೆ. ಅದರಲ್ಲಿ ಮೂಗೂರಿನಲ್ಲಿ 145 ಜನರ ರೆಕಾರ್ಡ್ ರೆಡಿ ಆಗಿ ಪಾಸು ಆಗಿದೆ. ಕುಪ್ಪಗುಡ್ಡೆಯಲ್ಲಿ 371 ರೆಕಾರ್ಡ್ ರೆಡಿಯಾಗಿ ಪಾಸು ಆಗಿದೆ. ಕಾತುವಳ್ಳಿಯಲ್ಲಿ 267 ರೆಕಾರ್ಡ್ ರೆಡಿಯಾಗಿ ಪಾಸು ಆಗಿವೆ. ಹೊಸೂರಿನಲ್ಲಿ 239 ಆಪ್ಲಿಕೇಷನ್‌ಗಳು ಆಖೈರಾಗಿ ಫೈಸಲಾಗಿವೆ. ಅಂದಪಳ್ಳಿಯಲ್ಲಿ 137 Occupancy records build up ಆಗಿದೆ.

ಶ್ರೀ ವಿ.ಎಸ್. ಲಕ್ಷ್ಮೀಕಾಂತಪ್ಪ.—ಇನಾಂದಾರರಿಗೆ ಕುಪ್ಪಗುಡ್ಡೆ ಮತ್ತು ಇನ್ನೆರಡು ಗ್ರಾಮಗಳಲ್ಲಿ ಪರಿಹಾರ ಕೊಟ್ಟಿಲ್ಲ ಎಂದು ತಿಳಿಸಿದ್ದೀರಿ. ಯಾವ ಕಾರಣದಿಂದ ಕೊಟ್ಟಿಲ್ಲ?

ಶ್ರೀ ಎಂ. ವಿ. ಕೃಷ್ಣಪ್ಪ.—ಕೆಲವು ಹಳ್ಳಿಗಳಲ್ಲಿ ಕಾಂಪೆಸೇಷನ್ ಯಾರೂ ಕೇಳಲಿಲ್ಲ. ಕೆಲವು ಹಳ್ಳಿಗಳಲ್ಲಿ ಸರ್ವೆ ಸೆಟ್ಲ್‌ಮೆಂಟ್ ಆಗಿಲ್ಲ. ಆದ್ದರಿಂದ ಹಾಗೆ ಆಗಿದೆ. They have to establish the right over the land. ಆ ರೆಕಾರ್ಡ್ ಪ್ರೊಡ್ಯೂಸ್ ಮಾಡಿಲ್ಲ. ಪ್ರೊಡ್ಯೂಸ್ ಮಾಡಿದ ಮೇಲೆ ಕೊಡುತ್ತಾರೆ.

ಶ್ರೀ ವಿ. ಎಸ್. ಲಕ್ಷ್ಮೀಕಾಂತಪ್ಪ.—ಕೆಲವರಿಗೆ ಪರಿಹಾರ ಕೊಡುವುದು ತಡವಾಗಿರುವುದರಿಂದ ಅವರು ಕೋರ್ಟುಗಳಿಗೆ ಹೋಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ?

ಶ್ರೀ ಎಂ. ವಿ. ಕೃಷ್ಣಪ್ಪ.—ಸರ್ಕಾರ ತಡಮಾಡಲು ಕಾರಣವಿಲ್ಲ. ಬೇಕಾದ ರಿಕಾರ್ಡನ್ನು ಪ್ರೊಡ್ಯೂಸ್ ಮಾಡಿ ಟೈಟಲ್ ಡೀಡ್ ತೋರಿಸಿದ ತಕ್ಷಣ ಸರ್ಕಾರ ಪರಿಹಾರ ಕೊಡುತ್ತದೆ. ಅನೇಕರು ಇನ್ನೂ ಆಧಾರ ಒದಗಿಸದೆ ತಮಗೆ ಪರಿಹಾರ ಬರಬೇಕಾಗಿದೆ ಎಂದು ಕೇಳುತ್ತಾರೆ.

ಶ್ರೀ ಜಿ. ವೆಂಕಟೇಗೌಡ.—ಅಂಥ ಸಂದರ್ಭಗಳಲ್ಲಿ ಕೊಡಬೇಕಾದ ಪರಿಹಾರವನ್ನು ಕೋರ್ಟಿನಲ್ಲಿ ಡಿಪಾಜಿಟ್ ಮಾಡಲು ಸಾಧ್ಯವಿಲ್ಲವೆ?

ಶ್ರೀ ಎಂ. ವಿ. ಕೃಷ್ಣಪ್ಪ.—ಯಾರಿಗೆ ಕೊಡಬೇಕೆಂದು ಡಿಪಾಜಿಟ್ ಮಾಡುವುದು? ನಮ್ಮ ಹತ್ತಿರ ಹಣವಿದ್ದರೇನು? ಕೋರ್ಟಿನಲ್ಲಿದ್ದರೇನು?

ಶ್ರೀ ಜಿ. ವೆಂಕಟೇಗೌಡ.—ಸರಕಾರ ಕೊಡಲಿಲ್ಲವೆಂದು ರೈತ ಕೋರ್ಟಿಗೆ ಹೋಗುವುದನ್ನು ತಪ್ಪಿಸಲು ಕೋರ್ಟಿನಲ್ಲಿ ಡಿಪಾಜಿಟ್ ಮಾಡುವುದು ಸರಿಯಾದ ಮಾರ್ಗವಲ್ಲವೆ?

ಶ್ರೀ ಎನ್. ನಂಜೇಗೌಡ.—ರೀಸರ್ವೆ ಮಾಡಿದಾಗ ಅದರ ಛಾರ್ಜು ಕೊಡಬೇಕಲ್ಲವೆ?

ಶ್ರೀ ಎಂ. ವಿ. ಕೃಷ್ಣಪ್ಪ.—ಹೌದು ಫೋಡಿಛಾರ್ಜು ಮುಂತಾದ್ದನ್ನು ರೈತರಿಂದ ವಸೂಲು ಮಾಡುತ್ತಾರೆ.

Repair to the Bund near the Sluice of Tumkur Tank.

*Q.—113. Sri T. S. SIVANNA (Madhugiri).—

Will the Government be pleased to state:—

(*a*) when the bund near the sluice of Tumkur Tank was repaired;

(*b*) the amount spent to repair this bund;

(*c*) whether it has come to the notice of the Government that the bund which was repaired, again damaged on 3-9-1962 at the same place, thus causing great alarm;

(*d*) the steps they have taken so far against the concerned departmental officials who are responsible for the same?

A.—Sri ALUR HANUMANTHAPPA (Deputy Minister for Minor Irrigation).—

(*a*) During April 1961.

(*b*) Rs. 5,215.

(*c*) No; leak developed on 3-9-1962 is at a place different from the portion of the bund that was repaired previously.

(*d*) Does not arise in view of reply to clause (*c*) of the question.

ಶ್ರೀ ಟಿ. ಎಸ್. ಶಿವಣ್ಣ.—ಈ ಸಾರಿ ರಿಪೇರಿ ಮಾಡಿರುವ ಸ್ಥಳಕ್ಕೂ ಮತ್ತು ಹೋದ ಸಾರಿ ರಿಪೇರಿ ಮಾಡಿರುವ ಸ್ಥಳಕ್ಕೂ ಎಷ್ಟು ದೂರವಾಗುತ್ತದೆ?

† ಶ್ರೀ ಆಲೂರು ಹನುಮಂತಪ್ಪ.—1961 ರಲ್ಲಿ ಎರಡನೆಯ ಗ್ರೇಡಿನಲ್ಲಿ ದುರಸ್ತು ಮಾಡಲಾಗಿತ್ತು. ಆದಾದಮೇಲೆ ಪುನಃ ದುರಸ್ತು ಮಾಡಿರುವುದು ಮೂರನೆಯ ಗ್ರೇಡಿನಲ್ಲಿ.

ಶ್ರೀ ಟಿ. ಎಸ್. ಶಿವಣ್ಣ.—ಒಂದು ಗ್ರೇಡಿನಿಂದ ಇನ್ನೊಂದು ಗ್ರೇಡಿನವರೆಗೆ ಆಗುವ ದೂರವೆಷ್ಟು?

ಶ್ರೀ ಆಲೂರು ಹನುಮಂತಪ್ಪ.—99 ಅಡಿಗಳು.

ಶ್ರೀ ಟಿ. ಮಾದಯ್ಯಗೌಡ.—ಹಿಂದೆ ದುರಸ್ತು ಮಾಡಿದ್ದ ಸ್ಥಳದಲ್ಲೇ ಅಪಾಯವಾಗಿದೆಯೆಂದು ಪ್ರಶ್ನೆಯಲ್ಲಿ ಹೇಳಿದ್ದಾರೆ. ಅದಕ್ಕೆ ಹತ್ತಿರದಲ್ಲೇ ಆಗಿತ್ತೇ?

ಶ್ರೀ ಆಲೂರು ಹನುಮಂತಪ್ಪ.—ಎರಡನೆಯ ಸಲ ಲೀಕ್ ಆದುದು ಮೂರನೆಯ ಗ್ರೇಡಿನಲ್ಲಿ, ಮೊದಲನೆಯ ಸಲ ರಿಪೇರಿ ಮಾಡಿದ ಗ್ರೇಡಿನಲ್ಲಲ್ಲ.

ಶ್ರೀ ಕೆ. ಪಿ. ರೇವಣ್ಣ ಸಿದ್ದಪ್ಪ.—ಅಪಾಯವುಂಟಾದಾಗ ರಿಪೇರಿ ಮಾಡುವುದು ಇಲಾಖೆಯ ಪದ್ಧತಿಯೇ?

ಶ್ರೀ ಆಲೂರು ಹನುಮಂತಪ್ಪ.—ಹಾಗಲ್ಲ. ಈ ಕೆರೆಯ ಏರಿಯಲ್ಲಿ ಬಹಳ ಪುರಾತನ ಕಾಲದ ಮರಗಳಿದ್ದೂ, ಅವುಗಳ ಬೇರುಗಳು ಒಣಗಿದಾಗ ಲೀಕ್ ಆಗುತ್ತದೆ.

ಶ್ರೀ ಕೆ. ಪಿ. ರೇವಣ್ಣ ಸಿದ್ದಪ್ಪ.—ರಿಪೇರಿ ಕೆಲಸ ದಲ್ಲಿ ವಿಳಂಬವಾಗುತ್ತಿರುವುದಕ್ಕೆ ಕಾರಣವೇನು? ನೀರಾವರಿ ಯೋಜನೆಗಳಿಗೆ ಪ್ರಾಶಸ್ತ್ಯ ಕೊಡಬೇಕೆಂದು ಹೇಳುವಾಗ ನಿಧಾನಮಾಡುವುದು ಉಚಿತವೆ?

ಶ್ರೀ ಆಲೂರು ಹನುಮಂತಪ್ಪ.—ಅದಷ್ಟು ಜಾಗ್ರತೆ ರಿಪೇರಿ ಮಾಡಲಾಗುತ್ತಿದೆ; ನಿಧಾನ ಮಾಡುತ್ತಿಲ್ಲ.

ಶ್ರೀ ಟಿ. ಡಿ. ದೇವೇಂದ್ರಪ್ಪ.—ಎಷ್ಟು ವರ್ಷಗಳ ಹಿಂದೆ ಈ ಕೆರೆ ಕಟ್ಟಲಾಯ್ತು.

ಶ್ರೀ ಆಲೂರು ಹನುಮಂತಪ್ಪ.—ಬಹಳ ವರ್ಷಗಳ ಹಿಂದೆ. ತಕ್ಕ ರಿಪೇರಿಮಾಡಬೇಕಾಗಿದೆ. ಈ ಸಾರಿ 1,25,000 ರೂಪಾಯಿಗಳ ಅಂದಾಜಾಗಿದೆ. ಏರಿಗೆ ಮಣ್ಣು ಹಾಕುವುದು ಮುಂತಾದ್ದನ್ನು ಮಾಡಲು ಪ್ರಯತ್ನ ಮಾಡಲಾಗಿದೆ.

ಶ್ರೀ ಡಿ. ಪರಮೇಶ್ವರಪ್ಪ.—ಮೈನರ್ ಮತ್ತು ಮೇಜರ್ ಕೆರೆಗಳು ಯಾವ ಯಾವ ಸ್ಥಿತಿಯಲ್ಲಿವೆ ಎಂದು ವರ್ಷೇವರ್ಷೇ ವರದಿ ತರಿಸಬೇಕಾದ ರಿಪೇರಿ ಮಾಡುವ ವ್ಯವಸ್ಥೆಯಿದೆಯೆ?

ಶ್ರೀ ಆಲೂರು ಹನುಮಂತಪ್ಪ.—ಇಡೀ ಸಂಸ್ಥಾನದಲ್ಲಿರುವ ಕೆರೆಗಳ ಸ್ಥಿತಿಯನ್ನು ಸರಿಯಾಗಿ ತಿಳಿಯಲು ಟ್ಯಾಂಕ್ ಸರ್ವೆ ಮ್ಯಾನ್ಯುಯಲ್ ತಯಾರಿಸಲಾಗುತ್ತಿದೆ. ಅದಾದ ತಕ್ಷಣ ತಕ್ಕ ವ್ಯವಸ್ಥೆ ಮಾಡುತ್ತೇವೆ.

ಶ್ರೀ ಕೆ. ಲಕ್ಕಪ್ಪ.—ಪ್ರತಿವರ್ಷವೂ ಇಂಜನಿಯರು ಹೋಗಿ ಸರಿಯಾಗಿ ನೋಡದೆ ಹೋದುದರಿಂದ ತಾನೆ ತುಮಕೂರು ಕೆರೆಯಲ್ಲಿ ಆಗಾಗ್ಗೆ ತೊಂದರೆ ತಲೆದೋರುತ್ತಿರುವುದು?

ಶ್ರೀ ಆಲೂರು ಹನುಮಂತಪ್ಪ.—ಅದು ತಮ್ಮ ಅಭಿಪ್ರಾಯ. ಕೆರೆ ಏರಿಯಮೇಲೆ ಇರುವ ಕೆಲವು ಮರಗಳನ್ನು ಪೂಜಿಸುತ್ತಾರೆ. ಅವನ್ನು ಕಡಿಯಲು ಒಪ್ಪುವುದಿಲ್ಲ. ಇದರಿಂದ ತೊಂದರೆಯಾಗುತ್ತದೆ.

ಶ್ರೀ ಕೆ. ಲಕ್ಕಪ್ಪ.—ಈಗಲಾದರೂ ಇರುವ ಮರಗಳನ್ನು ತೆಗೆದು ತೊಂದರೆಯಾಗದಂತೆ ವ್ಯವಸ್ಥೆ ಮಾಡುತ್ತೀರಾ?

ಶ್ರೀ ಆಲೂರು ಹನುಮಂತಪ್ಪ.—ಮಾಡಬೇಕಾದ್ದೂ ಆವಶ್ಯಕ.

ಶ್ರೀ ಟಿ. ಡಿ. ದೇವೇಂದ್ರಪ್ಪ.—ಕೆರೆ ಏರಿಯ ಮೇಲೆ ಜಂಗಲ್ ಕ್ಲಿಯರ್ ಮಾಡಬೇಕೆಂಬ ನಿಯಮವಿಲ್ಲವೆ. ಹಾಗೆ ಮಾಡಿದರೆ ಈ ರೀತಿ ತೊಂದರೆಯಾಗುವುದಿಲ್ಲ. ಅಲ್ಲವೆ?

ಶ್ರೀ ಆಲೂರು ಹನುಮಂತಪ್ಪ.—ಜಂಗಲ್ ಕ್ಲಿಯರಿಂಗ್ ಪ್ರಶ್ನೆ ಬೇರೆ. ಈ ಸಂದರ್ಭದಲ್ಲಿ ಕೆರೆ ಏರಿಮೇಲಿನ ಮರ ತೆಗೆದ ಮೇಲೆ ಬೇರು ಒಣಗಿ ಕೊಳೆತು ಲೀಕ್ ಡೆವಲಪ್ ಆಗಲು ಕಾರಣವಾಗಿದೆ.

Grant of Land in Chandragiri Village of Dodderi Hobli, Madhugiri Taluk.

*Q.—115. Sri T. S. SHIVANNA (Madhugiri.)—

Will the Government be pleased to state:—

(*a*) the number of acres of land in Sy. Nos. 452, 453, and 444 in Chandragiri village, Dodderi Hobli, Madhugiri Taluk, that were released for cultivation from the date grove;

(*b*) the number of applications that were received for the grant of land in the above Sy. Nos. and from that village and outside that village;

(*c*) who are the persons got the land;

(*d*) whether it has come to the notice of the Government that persons who are not cultivators and residing in that village are granted lands?

A.—Sri M. V. KRISHNAPPA (Minister for Revenue).—

(*a*) No land has been released.

(*b*) 31 applications from persons residing in the village and 8 from persons not residing in the village.

(*c*) & (*d*) Does not arise in view of reply to (*a*).

ಶ್ರೀ ಟಿ. ಎಸ್. ಶಿವಣ್ಣ.—ಜಮೀನನ್ನು ಸ್ಥಳದವರಿಗೆ ಕೊಡಬೇಕೆಂಬುದು ಸರ್ಕಾರದ ಉದ್ದೇಶವೆ?

ಶ್ರೀ ಎಂ. ವಿ. ಕೃಷ್ಣಪ್ಪ.—ಸ್ಥಳದವರಿಗೆ ಕೊಡಬೇಕು. ಅನೇಕ ಸಂದರ್ಭಗಳಲ್ಲಿ ಪರಸ್ಥಳದವರಿಗೂ ಕೊಡಬೇಕಾಗುತ್ತದೆ. ಏಕೆಂದರೆ ಜಮೀನು ಮುಳುಗಡೆಯಾಗಿರುವ ರೈತರಿಗೆ ಅವರ ಊರಿನಲ್ಲಿ ಕೊಡಲು ಜಮೀನಿರದಿರುವ ಸಂದರ್ಭವಿರುತ್ತದೆ. ಆಗ ಬೇರೆ ಮಾರ್ಗವಿಲ್ಲ. ಎಕ್ಸ್-ಸರ್ವಿಸ್‌ಮೆನ್‌ಗೆ ಕೊಡಬೇಕು. ಹಾಗೆಯೇ ಪೊಲಿಟಿಕಲ್ ಸಫರರ್ಸ್‌ಗೆ ಬೇರೆ ಕೊಡಬೇಕು. ಇಂಥಹ ಸಂದರ್ಭಗಳಲ್ಲಿ ಹೊರಗಿನವರಿಗೂ ಕೊಡಬೇಕಾಗುತ್ತದೆ.